# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.462-2016 ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜ್ಯೋತಿ.ಸಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 02-09-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಎಸ್ ವಕೀಲರಿಂದಃ**

ನನ್ನ ವಿವಾಹವಾಗಿ 12 ವರ್ಷಗಳಾಗಿದ್ದು, ನನ್ನ ಗಂಡನ ಹೆಸರು ಕುಮಾರ್. ನನ್ನ ಗಂಡ ಮೂಲತಃ ಮುಸಲ್ಮಾನರಾಗಿದ್ದು, ಈಗ ಹಿಂದು ಆಗಿರುತ್ತಾರೆ. ನನ್ನ ಗಂಡನ ಮೂಲ ಹೆಸರು ಅಜೀಂ. ನನ್ನ ಗಂಡ ಮುಸ್ಲಿಂ ಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರಗೊಂಡ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

2. ನನ್ನ ತಾಯಿ ಹೆಸರು ಪಾರ್ವತಮ್ಮ. ನಾನು ನನ್ನ ತಾಯಿಯವನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಾಯಿಯವರು ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಯವನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ. ನನ್ನ ತಮ್ಮನ ಹೆಸರು ಮಹೇಶ್ ಆತನಿಗೆ ಇನ್ನೂ ವಿವಾಹವಾಗಿರುವುದಿಲ್ಲ. ನನ್ನ ತಂದೆ ಹೆಸರು ಲೇ.ಚಿನ್ನಸ್ವಾಮಿ. ನನ್ನ ತಂದೆಯನ್ನು ಹುಚ್ಚಯ್ಯ ಎಂಬ ಅಡ್ಡಹೆಸರಿನಿಂದಲೂ ಕರೆಯುತ್ತಿದ್ದರು. ನನ್ನ ತಾಯಿ ಪಾರ್ವತಮ್ಮನವರನ್ನು ನನ್ನ ತಂದೆ ವಿವಾಹವಾಗುವ ಪೂರ್ವದಲ್ಲಿಯೇ ಅವರಿಗೆ ಮದುವೆಯಾಗಿತ್ತು ಎಂದರೆ ಸರಿ. ನನ್ನ ತಂದೆಯ ಮೊದಲನೆ ಹೆಂಡತಿ ಹೆಸರು ಮರಮ್ಮ. ಆಕೆಗೆ ಒಬ್ಬನೆ ಮಗ ರವಿ ಎಂದರೆ ಸರಿ. ನನ ತಂದೆಯವರು ಜೀವಿತಾವಧಿಯಲ್ಲಿ ಅವರು ಎಸ್.ಐ.ಪಿ.ಎಂ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದಯವರು ಬದುಕಿದ್ದಾಗ ನಾನು ಅವರನ್ನು ನೋಡಿರುತ್ತೇನೆ. ನನ್ನ ತಂದೆಯವರು ಕೊಲೆಯಾಗಿ ತೀರಿ ಹೋಗಿರುತ್ತಾರೆ.

3. ನನ್ನ ತಾಯಿಯವರು ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರ ವಿರುದ್ಧ ಓ.ಎಸ್.ನಂ.39/1995 ರಂತೆ ಒಂದು ಸಿವಿಲ್ ದಾವಾವನ್ನು ಸಲ್ಲಿಸಿದ್ದರು ಎಂದರೆ ಸರಿ.

ಕೆಂಪಮ್ಮ ಎಂದರೆ ಮರಮ್ಮ. ರವಿ ಎಂದರೆ 2 ನೇ ಪ್ರತಿವಾದಿ ಎಂದರೆ ಸರಿ. ಬಿರೇಗೌಡನ ಹೆಂಡತಿ ಸುಬ್ಬಮ್ಮ ಎಂದರೆ ನಮ್ಮ ಅಜ್ಜಿ. ಬಿರೇಗೌಡನ ಮಗ ಮಹದೇವ ಎಂದರೆ ನನ್ನ ಚಿಕ್ಕಪ್ಪ. ನನ್ನ ತಾಯಿಯವರು ನನ್ನ ತಂದೆ ಚಿನ್ನಸ್ವಾಮಿ ರವರ ಮೊದಲನೆ ಹೆಂಡತಿ, ಮಗ, ನನ್ನ ಅಜ್ಜಿ, ಚಿಕ್ಕಪ್ಪ, ವಿಜಯಾ ಬ್ಯಾಂಕ್, ಎಸ್.ಐ.ಪಿ.ಎಂ ಕಾರ್ಖಾನೆಯ ಮ್ಯಾನೇಜರ್ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆಯವರ ಕುಟುಂಬದವರ ವಿರುದ್ಧ ದಾವೆ ಸಲ್ಲಿಸಿದ್ದ ವಿಚಾರ ಗೊತ್ತು, ಆದರೆ ವಿಜಯಾ ಬ್ಯಾಂಕ್, ಎಸ್.ಐ.ಪಿ.ಎಂ ಕಾರ್ಖಾನೆಯ ಮ್ಯಾನೇಜರ್ ವಿರುದ್ಧ ದಾವೆಯನ್ನು ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಖಾಲಿ ನಿವೇಶನ, ಮಂಗಳೂರು ಹೆಂಚಿನ ಮನೆ ಮತ್ತು ನಾಡಹೆಂಚಿನ ಮನೆ ಸೇರಿಸಿ ದಾವೆ ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ತಾಂಡವಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.103 ರ ವಿಸ್ತೀರ್ಣ 1 ಎಕರೆ 7 ಗುಂಟೆ, ಸರ್ವೆ ನಂ.73 ರ 0.23 ಗುಂಟೆ, ಸರ್ವೆ ನಂ.86 ರ ವಿಸ್ತೀರ್ಣ 1 ಎಕರೆ 12 ಗುಂಟೆ, ಸರ್ವೆ ನಂ.320 ರ ವಿಸ್ತೀರ್ಣ 0.20 ಗುಂಟೆಗೆ ಸ್ವತ್ತನ್ನು ಬಿ ಷೆಡ್ಯೂಲ್ ಸ್ವತ್ತು ಎಂದು ನಮೂದಿಸಿ ದಾವಾ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆಯವರು ಮರಣದ ಪರಿಹಾರಗಳನ್ನು ಸಿ ಷೆಡ್ಯೂಲ್ ಸ್ವತ್ತು ಎಂದು ನಮೂದಿಸಲಾಗಿತ್ತು ಎಂದರೆ ಸರಿಯಲ್ಲ. ಮೇಲ್ಕಂಡ ಎಲ್ಲಾ ಸ್ವತ್ತುಗಳಲ್ಲಿ 3/6 ಭಾಗ ಕೋರಿ ನಮ್ಮ ತಾಯಿಯವರು ನಮ್ಮಗಳ ಪರವಾಗಿ ದಾವಾ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**